ಊ) ಈ ಬಗ್ಗೆ ತಮಗೆ ಸ್ಥಳೀಯ ಜನರಿಂದ ಮನವಿಗಳು ಬಂದಿರುತ್ತವೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಸಚಿವರು).—

ಅ) ರಾಷ್ಟ್ರೀಕರಣಕ್ಕೆ ಒಳಗಾದ ವಂತ್ತು ವಾಹನ ಸಂಚಾರಕ್ಕೆ ಅನುಕೂಲವಾದ ರಸ್ತೆಗಳಿರುವ ಎಲ್ಲಾ ಹಳ್ಳಿಗಳಿಗೂ ವಾಹನ ಸೌಕರ್ಯ ಒದಗಿದೆ. ಉಳಿದ ಹಳ್ಳಿಗಳಿಗೆ ಅವುಗಳ ಸಾರಿಗೆ ಮಾರ್ಗಗಳು ರಾಷ್ಟ್ರೀಕರಣಕ್ಕೆ ಒಳಗಾದಾಗ ಸಾರಿಗೆ ಸಂಪರ್ಕ ಒದಗಿಸಲಾಗುವುದು.

ಆ) ಈಗ ೨೯ ಮಾರ್ಗಗಳಲ್ಲಿ ಸಾರಿಗೆ ನಿಗಮದ ವಾಹನಗಳನ್ನು ಓಡಿಸಲಾಗುತ್ತಿದೆ. ಸಾತನೂರು ಚೆನ್ನಪಟ್ಟಣ ಮತ್ತು ಕನಕಪುರ-ಚೆನ್ನಪಟ್ಟಣ ಬಸ್ ಸಂಚಾರ ಕಲ್ಪಿಸಲು ಸಾರ್ವಜನಿಕರಿಂದ ಮನವಿಗಳು ಬಂದಿವೆ.

ಇ) ಬೇಡಿಕೆ ಇರುವ ಹಳ್ಳಿಗಳ ಮಾರ್ಗಗಳು ರಾಷ್ಟ್ರೀಕರಣಕ್ಕೆ ಒಳಗಾಗಿದಾಗ ಸಾರಿಗೆ ಸಂಪರ್ಕ ಒದಗಿಸಲಾಗುವುದು.

ಈ) ಇಲ್ಲ. ಆದರೆ ೧೮ ಖಾಸಗಿ ಬಸ್‌ಗಳು ಈ ಮಾರ್ಗದಲ್ಲಿ ಈಗಾಗಲೆ ಓಡಾಡುತ್ತಿವೆ.

ಉ) ಚೆನ್ನಪಟ್ಟಣದಿಂದ-ಮೆಣಸಿಗೆಹಳ್ಳಿಯವರೆಗಿನ ಮಾರ್ಗವು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದೆ ಇರುವುದರಿಂದ, ಸಾರಿಗೆ ವ್ಯವಸ್ಥೆ ಮಾಡಲು ಸಾಧ್ಯವಾಗುವುದಿಲ್ಲ.

ಊ) ಬಂದಿವೆ.

ಶ್ರೀ ಕೆ. ಜೆ. ಶ್ರೀನಿವಾಸಮೂರ್ತಿ.— ನನ್ನ (ಈ) ಪ್ರಶ್ನೆಗೆ ೧೮ ಖಾಸಗಿ ಬಸ್ಸುಗಳು ಸಂಚಾರ ಮಾಡುತ್ತಿವೆ ಎಂದು ಹೇಳಿದ್ದೀರಿ. ಆದರೆ ಅಷ್ಟು ಬಸ್ಸುಗಳು ಸಂಚಾರ ಮಾಡುತ್ತಿಲ್ಲ. ಅಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಬಸ್ಸುಗಳಿಲ್ಲದೆ ತೊಂದರೆಯಾಗುವುದರಿಂದ ಆ ಮಾರ್ಗವನ್ನು ರಾಷ್ಟ್ರೀಕರಣ ಮಾಡಿ ಸರ್ಕಾರೀ ಬಸ್ಸುಗಳನ್ನು ಹಾಕುವುದಕ್ಕೆ ಸಾಧ್ಯವಿದೆಯೆ ? ಯಾವಾಗ ಹಾಕುತ್ತೀರಿ? ಕನಕಪುರದಿಂದ ಹಿಡಿದು ಮೆಣಸಿಗನಹಳ್ಳಿಯ ಮಾರ್ಗವಾಗಿ ಚೆನ್ನಪಟ್ಟಣಕ್ಕೆ ರಸ್ತೆ ಚೆನ್ನಾಗಿದೆ. ಅಲ್ಲಿ ಲೋಕೋಪಯೋಗಿ ಇಲಾಖೆಯವರು ರಸ್ತೆಯನ್ನು ಚೆನ್ನಾಗಿ ಮಾಡಿದ್ದಾರೆ. ಆದ್ದರಿಂದ ಅಲ್ಲಿಗೆ ಬಸ್ ಹಾಕಿಸಿಕೊಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಮೆಣಸಿಗನಹಳ್ಳಿ-ಚೆನ್ನಪಟ್ಟಣ ಮಾರ್ಗ ಸರಿಯಾಗಿದೆ ಎಂದು ಲೋಕೋಪಯೋಗಿ ಇಲಾಖೆಯಿಂದ ಪ್ರಮಾಣ ಪತ್ರ ಕೊಡಿಸಿದರೆ ಖಂಡಿತ ಬಸ್ ಹಾಕುವ ವ್ಯವಸ್ಥೆ ಮಾಡುತ್ತೇವೆ. ಈಗ ೧೮ ಖಾಸಗಿ ವಾಹನಗಳು ಓಡಾಡುತ್ತಿರುವುದರಿಂದ ಮತ್ತು ಆ ಪ್ರದೇಶ ವಿಕ ಸ್ವಾಮ್ಯಕ್ಕೆ ಒಳಪಡದೆ ಇರುವುದರಿಂದ ತಾಂತ್ರಿಕ ತೊಂದರೆಗಳು ಇರುತ್ತವೆ. ಆದರೂ ಆದನ್ನು ಪರಿಶೀಲನೆ ಮಾಡಿ ಕೆಲವು ಬಸ್ಸುಗಳನ್ನು ಹಾಕುವ ವ್ಯವಸ್ಥೆ ಮಾಡುತ್ತೇನೆ.

ಬಸ್ಸಿನ ಪ್ರಯಾಣ ದರವನ್ನು ಹೆಚ್ಚಿಸಿರುವ ಬಗ್ಗೆ

೮೩. ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದವರು ಇತ್ತೀಚೆಗೆ ಪ್ರಯಾಣಿಕರ ದರ ಹೆಚ್ಚಿಸಲು ಕಾರಣಗಳೇನು

ಆ) ಗ್ರಾಮಾಂತರ ಪ್ರದೇಶದಲ್ಲಿ ಮತ್ತು ನಗರ ಸಾರಿಗೆಯಲ್ಲಿ ಈ ಹೆಚ್ಚಳದ ಗರಿಷ್ಟ ಪ್ರಮಾಣವೆಷ್ಟು ?

ಇ) ಈ ಹೆಚ್ಚಳದಿಂದ ಜನತೆಗೆ ಆನಾನುಕೂಲ ಮತ್ತು ಅಸಮಾಧಾನ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಹೆಚ್ಚಳವನ್ನು ಕಡಿಮೆ ಮಾಡುವಂತೆ ಸರ್ಕಾರಕ್ಕೆ ಮನವಿಗಳು ಬಂದಿವೆಯೆ ಹಾಗಿದ್ದಲ್ಲಿ ಸರ್ಕಾರದವರು ಆ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಬಿಡಿ ಭಾಗಗಳು ಮತ್ತು ಇತರೇ ಉಪಕರಣಗಳ ಬೆಲೆಗಳು ಹೆಚ್ಚಾಗಿದ್ದು ಇದರಿಂದ ಉಂಟಾದ ಹೆಚ್ಚಿನ ವೆಚ್ಚವನ್ನು ಸಂಸ್ಥೆಯು ಭರಿಸಬೇಕಾಗಿರುವುದರಿಂದ ಪ್ರಯಾಣದ ದರಗಳನ್ನು ಹೆಚ್ಚಿಸಲಾಯಿತು.

ಆ) ಪರಿಷ್ಕರಣಕ್ಕೆ ಮೊದಲು ಮತ್ತು ಪರಿಷ್ಕರಣದ ನಂತರದ ಪ್ರಯಾಣದ ದರದ ವಿವರಗಳು ಈ ಕೆಳಕಂಡಂತಿವೆ.

	ಪರಿಷ್ಕರಣಕ್ಕೆ ಮೊದಲು (ಪೈಸೆಗಳಲ್ಲಿ)		ಪರಿಷ್ಕರಣವಾದ ನಂತರ (ಪೈಸೆಗಳಲ್ಲಿ)		
ನಗರ ಸಾರಿಗೆ ಹೊರವಲಯ (ಸಬ್-ಅರ್ಬನ್) ಹಂತಗಳಸಂಖ್ಯೆ	ನಗರ ಸಾರಿಗೆ (೨ ಕಿ. ಮೀ. ಹಂತ)	ಹೊರವಲಯ ೪ ಕಿ.ಮೀ. ಹಂತ	ನಗರ ಸಾರಿಗೆ ೨ ಕಿ. ಮೀ ಹಂತ	೧-೨-೫ರಿಂದ ಜಾರಿಗೆ ಬರಲಿರುವ ದರಗಳು	ಹೊರವಲಯ ೪ ಕಿ.ಮೀ. ಹಂತ
೧	೨	೩	೪	೫	೬
೧	೩೦	೪೦	೩೦	೩೦	೫೦
೨	೪೦	೬೦	೫೦	೫೦	೮೦
೩	೪೫	೬೦	೬೦	೫೦	೧೦೦
೪	೫೦	೧೦೦	೭೦	೬೦	೧೨೦
೫	೬೦	೧೨೦	೧೪೦	೭೦	೧೪೦
೬	೬೦	೧೪೦	೯೦	೭೦	೧೬೦
೭	೬೫	೧೬೦	೧೦೦	೯೦	೧೮೦
೮	೭೦	೧೮೦	೧೦೦	೯೦	೨೦೦
೯	೭೫	೨೦೦	೧೧೦	೧೦೦	೨೨೦
೧೦	೮೦	—	೧೨೦	೧೧೦	—
೧೧	೯೦	—	೧೨೦	೧೨೦	—
೧೨	೧೦೦	—	೧೨೦	೧೨೦	—
೧೩	೧೧೦	—	೧೪೦	೧೪೦	—
೧೪	೧೨೦	—	೧೪೦	೧೪೦	—

ದೂರ ಪ್ರಯಾಣದ ವಾಹನಗಳು.—

		ಪರಿಷ್ಕರಣಕ್ಕೆ ಮೊದಲು	ಪರಿಷ್ಕರಣದ ನಂತರ
೧.	ಸಾಮಾನ್ಯ ವಾಹನಗಳು	೬.೫ ಕಿ.ಮೀ. ದೂರದ ಒಂದು ಹಂತಕ್ಕೆ ೫೦ ಪೈಸೆ ಅಥವಾ ಅದರ ಭಾಗಕ್ಕೆ ಕನಿಷ್ಪ ೫೦ ಪೈಸೆ	೬.೫ ಕಿ.ಮೀ. ದೂರದ ಒಂದು ಹಂತಕ್ಕೆ ೬೦ ಪೈಸೆ ಅಥವಾ ಅದರ ಭಾಗಕ್ಕೆ ಕನಿಷ್ಪ ೬೦ ಪೈಸೆ.
೨.	ವೇಗದ ವಾಹನಗಳು	೬.೫ ಕಿ.ಮೀ. ದೂರದ ಒಂದು ಹಂತಕ್ಕೆ ೫೫ ಪೈಸೆ ಅಥವಾ ಅದರ ಭಾಗಕ್ಕೆ ಕನಿಷ್ಪ ೬೦ ಪೈಸೆ.	೬.೫ ಕಿ.ಮೀ. ದೂರದ ಒಂದು ಹಂತಕ್ಕೆ ೬೫ ಪೈಸೆ ಅಥವಾ ಅದರ ಭಾಗಕ್ಕೆ ಕನಿಷ್ಪ ೧೦೦ ಪೈಸೆ.

೩.	ಅರೆ ಸುಖಾಸೀನ ವಾಹನಗಳು	೬ ಕಿ.ಮೀ. ದೂರದ ಒಂದು ಹಂತಕ್ಕೆ ೬೨.೫ ಪೈಸೆ ಅಥವಾ ಅದರ ಭಾಗಕ್ಕೆ ಕನಿಷ್ಟ ೨೦೦ ಪೈಸೆ.	೬.೫ ಕಿ.ಮೀ. ದೂರದ ಒಂದು ಹಂತಕ್ಕೆ ೭೫ ಪೈಸೆ ಅಥವಾ ಅದರ ಭಾಗಕ್ಕೆ ಕನಿಷ್ಟ ೩೦೦ ಪೈಸೆ.
೪.	ಸಂಖಾಸೀನ ವಾಹನಗಳು	೬.೫ ಕಿ ಮೀ. ದೂರದ ಒಂದು ಹಂತಕ್ಕೆ ೭೫ ಪೈಸೆ ಅಥವಾ ಅದರ ಭಾಗಕ್ಕೆ ಕನಿಷ್ಟ ೩೦೦ ಪೈಸೆ.	೬.೫ ಕಿ.ಮೀ. ದೂರದ ಒಂದು ಹಂತಕ್ಕೆ ೯೦ ಪೈಸೆ ಅಥವಾ ಅದರ ಭಾಗಕ್ಕೆ ಕನಿಷ್ಟ ೪೦೦ ಪೈಸೆ.

೩) ದೂರ ಪ್ರಮಾಣದ ಸಾಮಾನ್ಯ ಮತ್ತು ವೇಗದ ವಾಹನಗಳ ಇದುವರೆಗಿನ ಪ್ರಯಾಣದ ದರದಲ್ಲಿನ ಹೆಚ್ಚಳವು ಒಂದು ಹಂತಕ್ಕೆ ೧೦ ಪೈಸೆ ಇದ್ದು, ಹೆಚ್ಚು ಪ್ರಯಾಣಿಕರು ೬ ಕಿ.ಮೀ.ಗಳವರೆಗೆ ಮಾತ್ರ ಪ್ರಯಾಣ ಮಾಡುವುದರಿಂದ, ಪ್ರಯಾಣದ ದರದ ಹೆಚ್ಚಳವು ೧೦ ಪೈಸೆಯಿಂದ ಒಂದು ರೂಪಾಯಿವರೆಗೆ ಮಾತ್ರ ಸೆಟ್ಟಿಸಿರುವುದರಿಂದ ಹೆಚ್ಚಿನ ತೊಂದರೆ ಆಗಿರುವುದಿಲ್ಲ. ಇದಕ್ಕಿಂತ ಹೆಚ್ಚಾಗಿ ೧೨ ವರ್ಷದ ಒಳಗಿನ ಶಾಲಾ ಮಕ್ಕಳಿಗೆ ಉಚಿತ ಪ್ರಯಾಣದ ಸೌಲಭ್ಯವನ್ನು ೧೨ ವರ್ಷಕ್ಕೆ ಮೇಲ್ಪಟ್ಟ ಶಾಲಾ ಮಕ್ಕಳಿಗೆ ತಿಂಗಳಿಗೆ ೫ ರೂ ನಂತೆಯು ಸಾರಿಗೆ ದರವನ್ನು ನಿಗಧಿಪಡಿಸಲಾಗಿದೆ.

ಈ) ಸರಕಾರಕ್ಕೆ ಈ ಹೆಚ್ಚಳದ ಬಗ್ಗೆ ಮನವಿಗಳು ಬಂದಿರುವುದರಿಂದ, ಕೆಲವು ಹಂತಗಳಲ್ಲಿ ರಿಯಾಯಿತಿಯನ್ನು ಕೊಡಲು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಈ ರಿಯಾಯಿತಿಯು ೧-೨-೧೯೮೪ ರಿಂದ ಜಾರಿಗೆ ಬರುವುದು. ಅವುಗಳ ವಿವರ ಈ ಕೆಳಕಂಡಂತಿದೆ.—

ಹಂತಗಳ ಸಂಖ್ಯೆ	ಪರಿಷ್ಕರಣದ ದರಗಳು	೧-೨-೮೪ ರಿಂದ ಜಾರಿಗೆ ಬರಲಿರುವ ದರಗಳು	ಕಡಿಮೆ ಮಾಡಲಾದ ದರ (ಪೈಸೆಗಳು)
೧	೨	೩	೪
ಅ) ನಗರ ಸಾರಿಗೆ			
೧	೩೦	೩೦	—
೨	೫೦	೫೦	೧೦
೩	೬೦	೬೦	೧೦
೪	೭೦	೭೦	೨೦
೫	೮೦	೮೦	೨೦
೬	೧೦೦	೯೦	೧೦
೭	೧೦೦	೯೦	೧೦
೮	೧೨೦	೧೦೦	೧೦
೧೦	೧೨೦	೧೧೦	೧೦
೧೧	೧೨೦	೧೨೦	—
೧೨	೧೨೦	೧೨೦	—
೧೩	೧೪೦	೧೪೦	—

೧	೨	೩	೪
೮)	ಸಾಮಾನ್ಯ ವಾಹನಗಳು (ಗ್ರಾಮಾಂತರ ಪ್ರದೇಶ)		
೧	೬೦	೬೦	—
೨	೧೨೦	೧೧೦	೧೦
೩	೧೮೦	೧೭೦	೧೦
೪	೨೪೦	೨೩೦	೧೦
೫	೩೦೦	೨೯೦	೧೦
೬	೩೬೦	೩೫೦	೧೦
೭	೪೨೦	೪೧೦	೧೦
೮	೪೮೦	೪೭೦	೧೦
೯	೫೪೦	೫೩೦	೧೦
೧೦	೬೦೦	೫೪೦	೨೦
೨೦	೧೨೦೦	೧೧೭೦	೩೦
೩೦	೧೮೦೦	೧೭೫೦	೬೦
೪೦	೨೪೦೦	೨೩೪೦	೬೦
೫೦	೩೦೦೦	೨೯೨೦	೮೦
೯)	ವೇಗ ವಾಹನಗಳು (ಗ್ರಾಮಾಂತರ ಪ್ರದೇಶ)		
೧	೧೦೨	೮೦	೨೦
೨	೧೫೦	೧೩೦	೨೦
೩	೨೦೦	೧೯೦	೧೦
೪	೨೬೦	೨೫೦	೧೦
೫	೩೩೦	೩೨೦	೧೦
೬	೩೯೦	೩೮೦	೧೦
೭	೪೬೦	೪೫೦	೧೦
೮	೫೨೦	೫೦೦	೧೦
೯	೬೦೦	೫೯೦	೧೦
೧೦	೬೨೦	೬೧೦	೧೦
೨೦	೧೩೦೦	೧೨೯೦	೧೦
೩೦	೧೯೫೦	೧೯೩೦	೨೦
೪೦	೨೬೦೦	೨೫೮೦	೨೦
೫೦	೩೨೫೦	೩೨೨೦	೩೦
೬೦	೩೯೦೦	೩೮೬೦	೪೦
೭೦	೪೫೦೦	೪೪೭೦	೩೦
೮೦	೫೨೦೦	೫೧೪೦	೪೦
೯೦	೫೮೫೦	೫೭೮೦	೫೦
೧೦೦	೬೫೦೦	೬೪೩೦	೭೦
೧೧೦	೭೧೫೦	೭೦೭೦	೮೦
೧೨೦	೭೮೦೦	೭೭೦೦	೧೦೦

ಶ್ರೀ ಪಿ. ರಾಮದೇವ್.—ಮೊದಲು ಮಂತ್ರಿಗಳಿಗೆ ಮತ್ತು ಮಂತ್ರಿಗಳ ಮುಂಖಾಂತರ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬಸ್ ದರ ಹೆಚ್ಚು ಮಾಡಿದ ತಕ್ಷಣ ಶಾಸಕರಿಂದ ಮತ್ತು ಸಾರ್ವಜನಿಕರಿಂದ ಕಡಿಮೆ ಮಾಡಬೇಕು ಎಂದು ಮನವಿಗಳು ಬಂದವು. ಆದರೆ ಆಧಾರದ ಮೇಲೆ ಸರ್ಕಾರದವರು ರಿಯಾಯಿತಿ ಕೊಟ್ಟಿರುವುದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಬಿಡಿ ಭಾಗಗಳು ಮತ್ತು ಇತರೆ ಉಪಕರಣಗಳ ಬೆಲೆ ಹೆಚ್ಚಾಗಿದ್ದರಿಂದ ದರ ಜಾಸ್ತಿ ಮಾಡಬೇಕಾಯಿತು ಎಂದು ಹೇಳಿದ್ದೀರಿ. ಈ ಬಿಡಿಭಾಗಗಳು ಮತ್ತು ಇತರ ಉಪಕರಣಗಳ ಬೆಲೆ ಹಿಂದೆ ಎಷ್ಟು ಜಾಸ್ತಿಯಾಗುತ್ತಿತ್ತು ? ಈಗ ಎಷ್ಟು ಜಾಸ್ತಿಯಾಗಿದೆ? ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಟಿ.ಎಸ್. ಬಸ್ಸುಗಳಲ್ಲಿ ಹಿಂದೆ ವಿಷ್ಟು ಪ್ರಯಾಣಿಕರು ಪ್ರಯಾಣ ಮಾಡುತ್ತಿದ್ದರು ? ಈಗ ಎಷ್ಟು ಜನ ಪ್ರಯಾಣ ಮಾಡುತ್ತಿದ್ದಾರೆ ? ಆಗ ಎಷ್ಟು ಆದಾಯ ಬರುತ್ತಿತ್ತು, ಈಗ ಎಷ್ಟು ಆದಾಯಬರುತ್ತಿದೆ ? ಇದಕ್ಕೆ ಮಾನ್ಯ ಮಂತ್ರಿಗಳು ದಯವಿಟ್ಟು ಉತ್ತರ ಕೊಡುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್.—ಕೇವಲ ೪ ಅವಶ್ಯಕ ವಸ್ತುಗಳಲ್ಲಿ ಆಗಿರುವ ವ್ಯತ್ಯಾಸವನ್ನು ತೋರಿಸಿದರೆ ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ ಎಂಬುದು ಅರ್ಥವಾಗಬಹುದು. ಎಚ್.ಎಸ್.ಡಿ. ಆಯಿಲ್ ೧೯೮೦-೮೧ಕ್ಕಿಂತ ೧೯೮೧-೮೨ರಲ್ಲಿ ೩೧೫ ಲಕ್ಷ ರೂಪಾಯಿಗಳು ಹೆಚ್ಚಾಗಿದೆ. ೧೯೮೧-೮೨ಕ್ಕಿಂತ ೮೨-೮೩ರಲ್ಲಿ ೬೦ ಲಕ್ಷ ರೂಪಾಯಿಗಳು ಹೆಚ್ಚಾಗಿದೆ. ಎಂಜಿನ್ ಆಯಿಲ್ ಮತ್ತು ಲೂಬ್ರಿಕೇಟ್‌ನಲ್ಲಿ ೧೯೮೦-೮೧ ಕ್ಕಿಂತ ೧೯೮೧-೮೨ರಲ್ಲಿ ೩೫ ಲಕ್ಷ ರೂಪಾಯಿಗಳು ಹೆಚ್ಚಾಗಿದೆ.ಟೈರು, ಟ್ಯೂಬು, ಇತರೆ ಬಿಡಿ ಭಾಗಗಳು ೧೯೮೦-೮೨ರಲ್ಲಿ ೧೭೩ ಲಕ್ಷ ರೂಪಾಯಿ ಹೆಚ್ಚಾದರೆ ೧೯೮೨-೮೩ರಲ್ಲಿ ೫೦ ಲಕ್ಷ ರೂಪಾಯಿ ಹೆಚ್ಚಾಗಿದೆ. ತುಟ್ಟಿಭತ್ಯಕ್ಕೆ ೧೯೮೧-೮೨ರಲ್ಲಿ ೩೬೦ ಲಕ್ಷ ರೂಪಾಯಿ ಹೆಚ್ಚಾಗಿದ್ದರೆ ೧೯೮೨-೮೩ರಲ್ಲಿ ೧೭೨ ಲಕ್ಷ ಹೆಚ್ಚಾಗಿದೆ ಈ ನಾಲ್ಕು ಅಂಶಗಳಿಂದ ೧೯೮೦-೮೧ಕ್ಕಿಂತ ೮೧-೮೨ರಲ್ಲಿ ೮೮೩ ಲಕ್ಷ ರೂಪಾಯಿ ಹೆಚ್ಚಾಗಿದೆ. ೧೯೮೧-೮೨ನೇ ಸಾಲಿಗಿಂತ ೧೯೮೨-೮೩ರಲ್ಲಿ ೨೮೭ ಲಕ್ಷ ಹೆಚ್ಚಾಗಿದೆ ಈ ರೀತಿ ದರಗಳು ಹೆಚ್ಚಾಗಿರುವುದರಿಂದ ಅನಿವಾರ್ಯವಾಗಿ ಬಸ್ ದರಗಳನ್ನು ಹೆಚ್ಚಿಸಬೇಕಾಯಿತು.

ಅಧ್ಯಕ್ಷರು.—ಇಲಾಖೆ ಬೇಡಿಕೆ ಬಂದಾಗ ವಿವರವಾಗಿ ಚರ್ಚೆ ಮಾಡಬಹುದು.

ಶ್ರೀ ಪಿ. ರಾಮದೇವ್.—೧೨ ವರ್ಷದೊಳಗಿನ ಮಕ್ಕಳಿಗೆ ಮತ್ತು ವಯಸ್ಸಾದವರಿಗೆ ಇತರರಿಗೆ ರಿಯಾಯಿತಿ ಕೊಟ್ಟಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೆ ?

ಶ್ರೀ ಎಂ.ಪಿ. ಪ್ರಕಾಶ್.—ನಾವು ಕೊಟ್ಟಿರತಕ್ಕ ಅನೇಕ ರಿಯಾಯಿತಿಗಳಿಂದ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ೨ ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ. ಈಗ ೩೦ ಸಾವಿರ ಪಾಸ್‌ಗಳನ್ನು ಬೆಂಗಳೂರು ನಗರದಲ್ಲಿ ವಿದ್ಯಾರ್ಥಿಗಳಿಗೆ ಕೊಟ್ಟಿದ್ದೇವೆ. ಶಾಲಾಕಾಲೇಜುಗಳಿಂದ ಸರ್ಟಿಫಿಕೇಟುಗಳನ್ನು ತಂದಿಲ್ಲದೇ ಇರುವುದರಿಂದ ಕೆಲವರಿಗೆ ಕೊಟ್ಟಿಲ್ಲ. ವಯಸ್ಸಾದವರೂ ಕೂಡ ರಿಯಾಯಿತಿ ಪಾಸ್‌ಗಳನ್ನು ಪಡೆಯುತ್ತಿದ್ದಾರೆ. ವಿಶೇಷವಾಗಿ ಪಿಳ್ಳಿಸ್ ಹೋಗುವವರು ಈಗ ಜಾಸ್ತಿಯಾಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಮಂತ್ರಿಗಳು ಹೇಳಿದರು ಹೆಚ್ಚಿಸಿದ ದರವನ್ನು ಕಡಿಮೆ ಮಾಡಿ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದೇವೆ ಎಂದು. ಇದರಿಂದ ೨ ಕೋಟಿ ರೂಪಾಯಿಗಳು ನಷ್ಟವಾಗುತ್ತದೆ ಎಂದೂ ಹೇಳಿದ್ದಾರೆ ಈ ಲುಕ್ಸಾನನ್ನು ಯಾವರೀತಿ ತುಂಬುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ ? ರಿಸೋರ್ಸ್ ಮೊಬಲೈಸೇಷನ್ ಯಾವರೀತಿ ಮಾಡುತ್ತೀರಿ ? ಶಾಸಕರು ಮತ್ತು ಇತರರಿಂದ ಮನವಿಗಳು ಬಂದಮೇಲೆ ದರವನ್ನು ಕಡಿಮೆ ಮಾಡಿದ್ದೇವೆಂದು ತಿಳಿಸಿದ್ದೀರಿ. ಈ ನಷ್ಟವನ್ನು ಯಾವರೀತಿ ತುಂಬುತ್ತೀರಿ ಎಂಬುದನ್ನು ತಿಳಿಸಿ.

ಶ್ರೀ ಎಂ. ಪಿ. ಪ್ರಕಾಶ್.—ಲಾಭ ಮತ್ತು ನಷ್ಟ ಇಲ್ಲದ ರೀತಿಯಲ್ಲಿ ಸಂಸ್ಥೆಯನ್ನು ನಡೆಸುತ್ತಿದ್ದೇವೆ ನಾವು ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟು ಹೆಚ್ಚುವರಿ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈಗ ನಾವು ಹೊಸದಾಗಿ ಸೈಲಾನ್ ಟೈರುಗಳನ್ನು ಬಳಕೆ ಮಾಡುತ್ತಿರುವುದರಿಂದ ಇದು ಹೆಚ್ಚು ಕಾಲ ಬಾಳಿಕೆ ಬರುತ್ತದೆ. ರೀಟ್ರೇಡಿಂಗ್ ವಿಚಾರದಲ್ಲಿ ಕೋಲ್ಪ್ ಟ್ರೀಟ್‌ಮೆಂಟ್ ಪ್ಲಾಂಟ್‌ನಿಂದ ಹೊಸ ತಾಂತ್ರಿಕ ಜ್ಞಾನವನ್ನು ಪಡೆದು ಮಾಡುತ್ತಿರುವುದರಿಂದ ಅದರ ಆಯಸ್ಸನ್ನು ಹೆಚ್ಚಾಗುತ್ತದೆ. ಇದರಿಂದ ಟೈರ್ ಖರ್ಚಿನಲ್ಲಿ ಕಡಿಮೆಯಾಗುತ್ತದೆ. ಮೊದಲು ಬಂದು ಪರ್ಸೆಂಟ್ ಚೆಕ್ ಮಾಡುವ ವಿಧಾನವಿದ್ದರೆ ಈಗ ೨ ಪರ್ಸೆಂಟ್ ಚೆಕ್ ಮಾಡುವ ವಿಧಾನವನ್ನು ಜಾರಿಗೆ

ತಂದಿದ್ದೇವೆ. ಇದರಿಂದ ನಷ್ಟ ಕಡಿಮೆಯಾಗಿದೆ. ಉದಾಹರಣೆಗೆ ಬಿಜಾಪುರ ವಿಭಾಗದಲ್ಲಿ ೩೭ ಲಕ್ಷ ರೂಪಾಯಿ ನಷ್ಟ ಇದ್ದದ್ದು ಬಸ್ ದರ ಏರಿಸುವ ಪೂರ್ವದಲ್ಲಿ ಬಿಗಿ ಕ್ರಮ ತೆಗೆದುಕೊಂಡಿದ್ದರಿಂದ ೬೭ ಲಕ್ಷ ರೂಪಾಯಿ ಲಾಭ ಬಂದಿದೆ.

ಶ್ರೀ ಎಂ. ಸೂರ್ಯನಾರಾಯಣ ರಾವ್.--ಬಸ್ ದರ ಏರಿಕೆಯಿಂದ ಜನರಲ್ಲಿ ಅಸಮಾಧಾನ ಉಂಟಾಗಿಲ್ಲಿಲ್ಲ ಎಂದು ಮಂತ್ರಿಗಳು ಹೇಳಿದರು. ನಂತರ ಮನವಿಗಳು ಬಂದವು ಎಂದು ಹೇಳಿದ್ದಾರೆ. ಯಾವುದೇ ನೋಟೀಸ್ ಕೊಡದೆ ಬಸ್ ದರಗಳನ್ನು ಏರಿಸಿದ್ದರಿಂದ ಜನರಿಗೆ ತೊಂದರೆಯಾಗಿತ್ತು. ಈಗ ೮೦ ಪೈಸೆಯಿಂದ ೧ ರೂಪಾಯಿಯವರೆಗೆ ಮಾತ್ರ ರಿಯಾಯಿತಿ ಕೊಟ್ಟಿರುವುದನ್ನು ನೋಡಿದರೆ ಸಂಮ್ಮನೆ ಕಣ್ಣೊರೆಸುವುದಕ್ಕೆ ಕ್ರಮ ತೆಗೆದುಕೊಂಡಂತೆ ಕಾಣಿಂತ್ತದೆ. ಜನಗಳ ಆರ್ಥಿಕ ಪರಿಸ್ಥಿತಿಯನ್ನು ವಿಚಾರ ಮಾಡಿ ಬಸ್ ದರ ಕಡಿಮೆ ಮಾಡುವ ವಿಚಾರದಲ್ಲಿ ಪುನರ್ ಪರಿಶೀಲನೆ ಮಾಡಬೇಕು. ಜನರಲ್ಲಿ ಈಗ ಅಸಮಾಧಾನ ಇದೆ.

ಶ್ರೀ ಎಂ. ಪಿ. ಪ್ರಕಾಶ್.--ನಾನು ಜನರಲ್ಲಿ ಅಸಮಾಧಾನ ಆಗಿಲ್ಲ ಎಂಬ ಮಾತನ್ನು ಹೇಳಲೇ ಇಲ್ಲ ಆದರೆ ಕೆಲವು ಮನವಿಗಳು ಬಂದಿದ್ದರಿಂದ ಇರತಕ್ಕ ಸಂಪನ್ಮೂಲಗಳ ಇತಿಮಿತಿಯಲ್ಲಿ ದರಗಳನ್ನು ಕಡಿಮೆ ಮಾಡಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.--ಡೀಸೆಲ್ ದರ, ಟೈರು ಮತ್ತು ಇತರೆ ಬಿಡಿ ಭಾಗಗಳ ದರ ಜಾಸ್ತಿಯಾದರೆ ಅದನ್ನು ಭರಿಸುವುದಕ್ಕೆ ಎಷ್ಟು ಪರ್ಸೆಂಟ್ ಹೆಚ್ಚಿಸಬೇಕೋ ಆಪರಮಟ್ಟಿಗೆ ಹೆಚ್ಚಿಸಿದರೆ ಅದು ಒಪ್ಪತಕ್ಕ ಮಾತು. ಆದರೆ ಕೆ ಎಸ್.ಆರ್.ಟಿ.ಸಿ ಮತ್ತು ಬಿ.ಟಿ.ಎಸ್.ಗಳಲ್ಲಿ ಸೋರಿಹೋಗತಕ್ಕ ಹಣವನ್ನು ತಡೆಗಟ್ಟುವುದಕ್ಕೆ ಕಾರ್ಯಕ್ರಮ ಹಾಕದೇ ಹೋದರೆ ಬಸ್ ದರ ಏರಿಸಿ ಏನೂ ಪ್ರಯೋಜನ ವಾಗುವುದಿಲ್ಲ. ಆದ್ದರಿಂದ ಸೋರಿಹೋಗುವುದನ್ನು ನಿಲ್ಲಿಸುವುದಕ್ಕೆ ನೀವು ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಅದರಿಂದ ಎಷ್ಟು ಕೋಟಿ ರೂಪಾಯಿಗಳನ್ನು ಉಳಿಸುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎಂ. ಪಿ. ಪ್ರಕಾಶ್.--ಒಂದು ಪರ್ಸೆಂಟ್ ಚೆಕ್ ಮಾಡುವ ವಿಧಾನವಿರುವುದನ್ನು ೨ ಪರ್ಸೆಂಟಿಗೆ ಏರಿಸುವ ಮೂಲಕ ಅನೇಕ ಕಡೆ ಸೋರಿಹೋಗುವುದನ್ನು ತಡೆಗಟ್ಟುತ್ತಿದ್ದೇವೆ. ಉದಾಹರಣೆಗೆ ಬಳ್ಳಾರಿ ಜಿಲ್ಲೆಯಲ್ಲಿ ಹೋದ ವರ್ಷ ಒಂದು ಕೋಟಿ ೬೦ ಲಕ್ಷ ರೂಪಾಯಿಗಳು ನಷ್ಟ ವಾಗಿತ್ತು. ಬಸ್ ದರ ಏರಿಸುವ ಪೂರ್ವದಲ್ಲಿ ಬಿಗಿ ಕ್ರಮ ಕೈಗೊಂಡಿದ್ದರಿಂದ ಆ ನಷ್ಟವನ್ನು ೭೦ ಲಕ್ಷ ರೂಪಾಯಿಗೆ ಇಳಿಸಿದ್ದೇವೆ ಪ್ರೈಯಲ್ ಕನ್‌ಸಂಷನ್ ಟಾಟಾರವರ ಬಸ್‌ನಲ್ಲಿ ಜಾಸ್ತಿಯಾಗಿದ್ದರೆ ಲೀಲಾಂಡ್‌ನಲ್ಲಿ ಕಡಿಮೆಯಾಗಿದೆ. ರಸ್ತೆಗಳು ಸರಿಯಾಗಿಲ್ಲದೆ ಕೆಲವು ಕಡೆ ತೊಂದರೆಯಾಗಿದೆ. ಈಗ ನೈಲಾನ್ ಟೈರುಗಳನ್ನು ಉಸಯೋಗಿಸುತ್ತಿರುವುದರಿಂದ ಮತ್ತು ಕೋಲ್ಡ್ ಟ್ರೀಟ್‌ಮೆಂಟ್ ಪ್ಲಾಂಟ್ ನಿಂದ ರೀಟ್ರೇಡ್ ಮಾಡುತ್ತಿದ್ದು ಈ ಹೊಸ ವಿಧಾನದಿಂದ ಅದರ ಬಾಳಿಕೆ ಹೆಚ್ಚಾಗುತ್ತಿದೆ. ಈ ಎಲ್ಲ ಕ್ರಮಗಳಿಂದ ನಷ್ಟ ಕಡಿಮೆಯಾಗುತ್ತದೆ.

ಶ್ರೀ ಎಚ್.ಡಿ. ಚೌಡಯ್ಯ.--ರಿಯಾಯಿತಿ ಕೊಟ್ಟಿರುವುದು ಬೆಂಗಳೂರು, ಮೈಸೂರು ಇಂಥ ನಗರ ಪ್ರದೇಶಗಳಲ್ಲಿ ಓಡಾಡತಕ್ಕ ಜನರಿಗೆ ಅನುಕೂಲವಾಗುತ್ತದೆ. ಆದರೆ ಗ್ರಾಮಾಂತರ ಪ್ರದೇಶ ಗಳಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಶಾಲಾ ಮಕ್ಕಳು, ವಯಸ್ಸಾದವರು ಹೋಗುವುದಕ್ಕೆ ಖಾಸಗಿ ಬಸ್ಸುಗಳನ್ನೇ ಅವಲಂಬಿಸಬೇಕಾಗಿದೆ. ಸರ್ಕಾರಿ ಬಸ್ಸುಗಳ ಓಡಾಟ ಅಲ್ಲಿ ಕಡಿಮೆ. ಇದರಿಂದಾಗಿ ನೀವು ನೀಡುವ ಸೌಲಭ್ಯಗಳು ಗ್ರಾಮಾಂತರ ಪ್ರದೇಶದ ಜನರಿಗೆ ಸಿಗುತ್ತಿಲ್ಲ. ನಮ್ಮ ಮಂಡ್ಯದಲ್ಲಂತೂ ಖಾಸಗಿ ಬಸ್ಸುಗಳೇ ಜಾಸ್ತಿ ಇದೆ. ಆದರೆ ಶೇಕಡ ೭೫ರಷ್ಟು ನಷ್ಟವನ್ನು ಹೊರತಕ್ಕವರು ಗ್ರಾಮಾಂತರ ಪ್ರದೇಶದ ಜನರೆ ಆದ್ದರಿಂದ ಈ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಎಂಬುದನ್ನು ಹೇಳಬೇಕು ?

ಶ್ರೀ ಎಂ. ಪಿ. ಪ್ರಕಾಶ್.--ಮಾನ್ಯ ಸದಸ್ಯರ ಕಳಕಳಿ ನನಗೆ ಗೊತ್ತಿದೆ. ಆದರೆ ೧೩ ಜಿಲ್ಲೆಗಳು ವಿಕಸ್ವಾವಂ ಕ್ಕೆ ಒಳಪಟ್ಟ ಜಿಲ್ಲೆಗಳಾಗಿವೆ. ವೃದ್ಧರಿಗೆ ಏನು ೧೧ ಗಂಟೆಯಿಂದ ೩ ಗಂಟೆಯವರೆಗೆ ರಿಯಾಯಿತಿ ಸೌಕರ್ಯವನ್ನು ಒದಗಿಸಿದ್ದೇವೆ ಅದು ನಗರ ಪ್ರದೇಶದವರಿಗೆ ಸಿಗುತ್ತಿದೆ. ಇದು ಹಳ್ಳಿ ಗಾಡಿನ ವೃದ್ಧರು ಹಾಗೂ ಮಕ್ಕಳಿಗೂ ಸಿಗಬೇಕಾಗುತ್ತದೆ. ಮಂಡ್ಯಾ ಜಿಲ್ಲೆಯಲ್ಲಿ ಖಾಸಗೀ ಬಸ್ ಗಳು ಇರುವುದರಿಂದ ಈ ಪ್ರಯೋಜನ ಅವರಿಗೆ ಸಿಗುತ್ತಿಲ್ಲ. ಈ ವಿಕಸ್ವಾಮ್ಯಕ್ಕೆ ಒಳಪಟ್ಟಂತೆ ಇದು ಆಗಂತ್ತದೆಂದು ನಾನು ಹೇಳುತ್ತೇನೆ.